## ಶ್ರದ್ಧಾ ವಿರಾಮ



'ಬತ್ತೀ ಗುಲ್ ಮೀಟರ್ ಚಾಲೂ' ಚಿತ್ರದ ಶೂಟಿಂಗ್ ಮುಗಿಸಿರುವ ಶ್ರದ್ಧಾ ಕಪೂರ್, ಕುಟುಂಬದ ಸದಸ್ಯರ ಜತೆಗೆ ವಿದೇಶಕ್ಕೆ ಹಾರಿದ್ದಾಳೆ. ಇದು ಕುಟುಂಬ ರಜೆ ಎನ್ನುವುದು ಆಕೆಯ ಸಬೂಬು. ಶಾಹಿದ್ ಕಪೂರ್ ಜತೆಗಿನ ಚಿತ್ರದಲ್ಲಿ ಕೆಲವು ವಾರಗಳ ಕಾಲ ಬಿಡುವಿಲ್ಲದೆ ನಟಿಸಿದ ಬಳಿಕ ಆಕೆಗೆ ನಿಜಕ್ಕೂ ವಿಶ್ರಾಂತಿಯ ಅಗತ್ಯವಿತ್ತಂತೆ.

ವಿದೇಶದಲ್ಲಿ ಅಪ್ಪ– ಅಮ್ಮನ ಜತೆಗೆ ಒಂದೆರಡು ವಾರ ಸುಖವಾಗಿ ಕಳೆಯುವುದು ಆಕೆಯ ಉದ್ದೇಶವಂತೆ. ಅಮ್ಮ ಶಿವಾಂಗಿ ಮತ್ತು ಸೋದರ ಸಿದ್ಧಾಂತ್ ಕಪೂರ್ ಮೊದಲೇ ವಿದೇಶಕ್ಕೆ ಹಾರಿದ್ದು, ಶೂಟಿಂಗ್ ಮುಗಿದ ತಕ್ಷಣ ಶ್ರದ್ಧಾ ಅಪ್ಪ ಶಕ್ತಿ ಕಪೂರ್ ಜತೆಗೆ ಹೋಗಿ ಕುಟುಂಬವನ್ನು ಸೇರಿಕೊಂಡಿದ್ದಾಳೆ.

ವಿದೇಶದಿಂದ ವಾಪಸ್ ಬಂದ ಬಳಿಕ ಆಕೆ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಜೀವನ ಕಥೆಯಾಧರಿತ ಸಿನಿಮಾದಲ್ಲಿ ಬ್ಯುಸಿ ಆಗಲಿದ್ದಾಳೆ. ಬತ್ತೀ ಗುಲ್ ಸಿನಿಮಾದ ಶೂಟಿಂಗ್‌ಗಿಂತ ಮುಂಚೆಯೇ ಆಕೆ ಹೈದರಾಬಾದ್‌ನಲ್ಲಿ ಕಠಿಣ ಬ್ಯಾಡ್ಮಿಂಟನ್ ತರಬೇತಿ ಆರಂಭಿಸಿದ್ದಳು. ಈಗ ವಿದೇಶದಿಂದ ವಾಪಸಾದ ಬಳಿಕ ತರಬೇತಿ ಮುಂದುವರಿಯಲಿದೆ. ಬ್ಯಾಡ್ಮಿಂಟನ್ ಆಟದ ಮಧ್ಯೆ ಪದೇ ಪದೇ ಕಟ್ ಮಾಡಲು ಚಿತ್ರದ ನಿರ್ದೇಶಕರು ಸಿದ್ಧವಿಲ್ಲವಂತೆ. ಹಾಗಾಗಿ ಶ್ರದ್ಧಾ ಆಟದ ಮೇಲೆ ಹೆಚ್ಚು ಗಮನ ಕೊಡಬೇಕಿದೆ. ಜತೆಗೇ ಕ್ರೀಡಾಪಟುವಿಗೆ ಇರಬೇಕಾದ ದೈಹಿಕ ಕ್ಷಮತೆಯನ್ನೂ ರೂಢಿಸಿಕೊಳ್ಳಬೇಕಿದೆ. ಅದಕ್ಕೆಂದೇ ಚಿತ್ರತಂಡ ಆಕೆಗೆ ಕಠಿಣ ಫಿಟ್‌ನೆಸ್ ತರಬೇತಿಯನ್ನೂ ನೀಡುತ್ತಿದೆ.

ಇನ್ನೊಂದೆಡೆ ಶ್ರದ್ಧಾಳ ಹಿಂದಿ ಚಿತ್ರ 'ಸಾಹೊ' ಶೂಟಿಂಗ್ ಕೂಡಾ ಮುಂದುವರಿಯಲಿದೆ. 'ಬಾಹುಬಲಿ' ಖ್ಯಾತಿಯ ಪ್ರಭಾಸ್ ಜತೆಗೆ ಶ್ರದ್ಧಾ ನಟಿಸುತ್ತಿರುವ ಸಾಹೊ ಬಿಡುಗಡೆ ಈ ವರ್ಷ ಆಗಲಿಕ್ಕಿಲ್ಲ, 2019ರಲ್ಲಿ ಆಗಬಹುದು ಎನ್ನುವ ಸುದ್ದಿಯೂ ಹಬ್ಬಿದೆ! 'ಬಾಹುಬಲಿ' ನಂತರ ಭಾರತದಲ್ಲಿ ಅತ್ಯಧಿಕ ಖರ್ಚು ತಗುಲಲಿರುವ ಚಿತ್ರವಿದು ಎಂದೂ ಹೇಳಲಾಗುತ್ತಿದೆ.

## ಬಿಡುವೇ ಇಲ್ಲದ ಫರ್ಹಾನ್



ಬಾಲಿವುಡ್‌ನಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಫರ್ಹಾನ್ ಅಖ್ತರ್ ಪ್ರತಿಸಲ ವಿಭಿನ್ನ ಚಿತ್ರಗಳಲ್ಲಿ ನಟಿಸಲು ಯತ್ನಿಸುತ್ತಿದ್ದಾನೆ. ಸೋದರಿ ಜೋಯಾ ಅಖ್ತರ್ ನಿರ್ದೇಶನದ 'ಗಲ್ಲಿ ಬಾಯ್' ಶೀಘ್ರ ಬಿಡುಗಡೆ ಕಾಣಲಿದೆ. ಈ ಚಿತ್ರದಲ್ಲಿ ತನ್ನ ಪಾಲಿನ ಶೂಟಿಂಗ್ ಮುಗಿಸಿರುವ ಅಲಿಯಾ ಭಟ್, ಇನ್‌ಸ್ಟಾಗ್ರಾಂನಲ್ಲಿ ಹರ್ಷ ಹಂಚಿಕೊಂಡಿದ್ದಾಳೆ. ರಣ್‌ವೀರ್ ಸಿಂಗ್ ಮತ್ತು ಫರ್ಹಾನ್ ಒಟ್ಟಿಗೆ ನಟಿಸುತ್ತಿರುವ ಈ ಚಿತ್ರಕ್ಕೆ ಫರ್ಹಾನ್ ಸಹ ನಿರ್ಮಾಪಕನೂ ಹೌದು. ಫರ್ಹಾನ್ ಒಪ್ಪಿಕೊಂಡಿರುವ ಹೊಸ ಚಿತ್ರ 'ಗೋಲ್ಡ್'ಗೆ ನಟ ಅಕ್ಷಯ ಕುಮಾರ್ ನಿರ್ಮಾಪಕ. ಹಾಗೆಯೇ ಶಾರೂಕ್ ಅಭಿನಯದ 'ಡಾನ್–3' ಅನ್ನು ಫರ್ಹಾನ್ ನಿರ್ದೇಶಿಸುತ್ತಿದ್ದಾನೆ. 'ದಿ ಫಕೀರ್ ಆಫ್ ವೆನಿಸ್' ಈತ ನಟಿಸುತ್ತಿರುವ ಮತ್ತೊಂದು ಮಹತ್ವಾಕಾಂಕ್ಷೆಯ ಚಿತ್ರ. ಒಟ್ಟಾರೆ ಫರ್ಹಾನ್, ನಟ– ನಿರ್ದೇಶಕ– ನಿರ್ಮಾಪಕನಾಗಿ ಫುಲ್ ಬ್ಯುಸಿ.

## ಮತ್ತೊಮ್ಮೆ ಡ್ರಾಕುಲಾ



ಹಾಲಿವುಡ್‌ನ ಡ್ರಾಕುಲಾ ಸಿನಿಮಾ 'ಹೋಟೆಲ್ ಟ್ರಾನ್ಸಿಲ್ವೇನಿಯಾ –3: ಎ ಮೋನ್‌ಸ್ಟರ್ ವೆಕೇಷನ್' ಇದೇ ತಿಂಗಳ 20ರಂದು ಇಂಗ್ಲಿಷ್ ಮತ್ತು ತಮಿಳಿನಲ್ಲಿ ಬಿಡುಗಡೆ ಕಾಣಲಿದೆ. 2012ರಲ್ಲಿ ಮೊದಲ ಬಾರಿಗೆ 'ಹೋಟೆಲ್ ಟ್ರಾನ್ಸಿಲ್ವೇನಿಯಾ' ಎನ್ನುವ ಕಾರ್ಟೂನ್– ಹಾರರ್ ಚಿತ್ರ ಬಿಡುಗಡೆಯಾಗಿತ್ತು. ಅದು ತಮ್ಮದೇ ಆದ ಹೋಟೆಲ್‌ನಲ್ಲಿ ವಾಸಿಸುವ ಡ್ರಾಕುಲಾಗಳ ಸಾಮ್ರಾಜ್ಯದ ಕಥೆ. 2015ರಲ್ಲಿ ಅದರ ಎರಡನೇ ಭಾಗ ಬಂತು. ಆ ಎರಡನೇ ಚಿತ್ರದಲ್ಲಿ ಡ್ರಾಕುಲಾಗಳು ತಮ್ಮ ಹೋಟೆಲ್ಲಿಗೆ ಆಕಸ್ಮಿಕವಾಗಿ ಬಂದ ಮನುಷ್ಯ ಪ್ರವಾಸಿಯೊಬ್ಬನ ಜತೆ ಒಡನಾಡುವ ಕಥೆ. ಈಗ ಮೂರನೆ ಭಾಗದಲ್ಲಿ ಕಥೆಗೆ ಹೊಸ ಟ್ವಿಸ್ಟ್ ಸಿಕ್ಕಿದೆ. ಹೋಟೆಲನ್ನು ಡ್ರಾಕುಲಾಗಳು ಮಾನವ ಅತಿಥಿಗಳಿಗೆ ತೆರೆದಿಟ್ಟಾಗ ಏನಾಯಿತು ಎನ್ನುವುದು ಮೂರನೇ ಭಾಗದ ಕಥೆ! ಎಷ್ಟೇ ವರ್ಷಗಳು ಉರುಳಿದರೂ ಹಾಲಿವುಡ್‌ನಲ್ಲಿ ಡ್ರಾಕುಲಾಗಳ ಕಥೆಯ ಮೋಹ ಇನ್ನೂ ಕಡಿಮೆಯಾಗಿಲ್ಲ. ಅದರಲ್ಲೂ ಕಾರ್ಟೂನ್ ಚಿತ್ರಗಳಲ್ಲಿ ಭಯವನ್ನೂ ತಮಾಷೆಯಾಗಿ ವಿವರಿಸುತ್ತಾರೆ. ಭಾರತೀಯರಿಗೂ ಸ್ಥಳೀಯ ಭೂತಗಳಿಗಿಂತ, ಹಾಲಿವುಡ್ ಡ್ರಾಕುಲಾಗಳ ಮೇಲೆಯೇ ಹೆಚ್ಚು ಒಲವು!

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65